ಹುಟ್ಟದಿದ್ರೆ ಕನ್ನಡ ನಾಡಲ್ಲಿ ಸೆಟ್ಲ್ ಆಗ್ಬೇಕು ಅಂತ ಹಾಡಿದಾಗ ಅಧಿಕಾರಿಗಳಿಗೆ ಸಂತೋಷ ಆಯಿತು. ಹೊಸ ಲಗೇಜ್ ಕಣ್ಣಿಗೆ ಬಿತ್ತು.

'ಏರ್‌ಪೋರ್ಟಿಂದ ಯಾರೋ ಬಂದ್ಹಾಗಿದೆ' ಎಂದರು.

'ನಾನೇ ಮೊನ್ನೆ ಅಯೋಧ್ಯೆಗೆ ಹೋಗಿದ್ದೆ' ಎಂದು ವಿಶ್ವ ಸುಳ್ಳು ಹೇಳಿದ.

'ನೀರಿನ ಉಳಿಕೆ, ಬಳಕೆ ಬಗ್ಗೆ ಈಗ ಹೇಳಿ' ಎಂದಾಗ ವಿಶ್ವ, ವಿಶಾಲು ಮುಖ ನೋಡಿಕೊಂಡರು.

'ನಾವು ತುಂಬಾನೇ ಕಡಿಮೆ ನೀರನ್ನ ಬಳಸ್ತಾ ಇದ್ದೀವಿ. ಗಂಟಲು ಒಣಗಿ ಬಂದಾಗ ಎಂಜಲು ನುಂಗ್ತೀವಿ'.

'ದಿನಕ್ಕೆ ಎಷ್ಟು ಸಲ ಸ್ನಾನ ಮಾಡ್ತೀರ?'

'ವಾರಕ್ಕೆ ಮೂರು ಸಲ ಸ್ನಾನ ಮಾಡ್ತೀವಿ' ಎಂದಾಗ ಅವರು,

'ಒಂದ್ನಿಮಿಷ ಇರಿ, ಬರ್ತ್ಕೋತೀನಿ' ಎಂದು ಸ್ನಾನದ ಕಾಲಂನಲ್ಲಿ 'ವಾರಕ್ಕೆ ಮೂರು ಸಲ' ಎಂದು ಬರೆದುಕೊಂಡು, 'ಓಕೆ! ಹ್ಯಾಪಿ, ಮುಂದೆ ಹೇಳಿ...'

'ಸ್ನಾನ ಹ್ಯಾಗೆ ಮಾಡ್ತೀರ?' ಎಂದಾಗ ವಿಶ್ವನಿಗೆ ಗಾಬರಿಯಾಯಿತು.

'ಸ್ನಾನ ಮಾಡೋದನ್ನ ನಿಮಗೆ ತೋರಿಸ್ಬೇಕಾಗುತ್ತಾ?' ಎಂದ ವಿಶ್ವ.

'ಇಲ್ಲ... ಹಾಗೇ ಹೇಳಿ, ಪರವಾಗಿಲ್ಲ' ಎಂದರು.

'ಕಡಿಮೆ ನೀರಲ್ಲಿ ಸ್ನಾನ ಮಾಡ್ತೀವಿ. ಮುಂಚೆ ಮುಖ ತೊಳ್ಕೊಂಡು ಬಿಡ್ತೀವಿ. ಮೈಗೆಲ್ಲ ಸೋಪ್ ಹಾಕ್ಕೊಂಡು ಬಿಡ್ತೀವಿ. ಆಮೇಲೆ ಎರಡು ತಂಬಿಗೆ ನೀರು ಎರಚ್ಕೊಂಡು ಟವೆಲ್‌ನಲ್ಲಿ ಒರೆಸ್ಕೊಂಡು ಬಂದ್ಬಿಡ್ತೀವಿ'.

'ನೋಡೀ, ಪ್ರತಿನಿತ್ಯ ಸ್ನಾನ ಮಾಡ್ಬೇಕು ಅಂತೇನಿಲ್ಲ' ಬೆಂಕಿ ಹೇಳಿದ.

'ಕಾಡಲ್ಲಿರೋ ಹುಲಿಯಾಗ್ಲಿ, ಕರಡಿಯಾಗ್ಲಿ, ಸಿಂಹ ಆಗ್ಲಿ ಯಾವ್ದೂ ಪ್ರತಿನಿತ್ಯ ಸ್ನಾನ ಮಾಡೊಲ್ಲ. ಕೆರೆ, ನದಿ ಸಿಕ್ರೆ ಈಜುತ್ತೆ. ಹೌದು ತಾನೇ? ಅವುಗಳ ಮೈಯಿ ಎಷ್ಟು ಸ್ವಚ್ಛವಾಗಿರುತ್ತೆ. ಹಾಗೇ ನಾವು ಮೈಯನ್ನ ಬೇರೆ ರೀತಿ ಸ್ವಚ್ಛವಾಗಿ ಇಟ್ಕೋಬಹುದು. ಸಿಂಪಲ್ ಅಂದ್ರೆ ಚಾಪೆಯಲ್ಲಿ ಹೊರಳಾಡಿದ್ರೆ ಸಾಕು, ದೂಳೆಲ್ಲಾ ಹೊರಟ್ಹೋಗುತ್ತೆ' ಎಂದಾಗ ವಿಶ್ವನಿಗೆ ಆಶ್ಚರ್ಯ ಆಯಿತು. ಅದನ್ನ ವೆಂಕಿ ವಿವರಿಸಿದ.

'ಕತ್ತೆ ರಸ್ತೇಲಿ ಹೊರಳಾಡುತ್ತಲ್ಲ ಹಾಗೆ ನೀವು ಹೊರಳಾಡಬಹುದು. ಆಮೇಲೆ ಒಂದು ವೆಟ್ ಕ್ಲಾತ್ ತಗೊಂಡು ಮೈಯೆಲ್ಲಾ ಒರೆಸ್ಕೊಂಡು ಬಿಟ್ರೆ ಸ್ನಾನ ಆಯ್ತು'.

ವಿಶಾಲು ಆಶ್ಚರ್ಯ ವ್ಯಕ್ತಪಡಿಸುತ್ತಾ,

'ಆಸ್ಪತ್ರೇಲಿ ಹಾಗೇ ಸ್ನಾನ ಮಾಡ್ಸೋದು. ಸ್ಪಾಂಜ್ ಬಾತ್ ಅಂತ ಹೇಳ್ತಾರೆ'.

'ಹೌದು, ನಮಗೆ ನೀರಿಗೆ ತೊಂದ್ರೆ ಇರೋವಾಗ ಪಬ್ಲಿಕ್ ಸಹಕರಿಸ್ಬೇಕು. ಎಲ್ರೂ ಸ್ಪಾಂಜ್ ಬಾತ್ ಮಾಡಿ'.

ಅಷ್ಟರಲ್ಲಿ ಬೆಂಕಿಗೆ ಕಿಟಕಿಯಾಚೆ ಇದ್ದ ಗಿಡಗಳು ಕಾಣಿಸಿದವು.

'ಓಹ್! ತುಂಬಾ ಗಿಡಗಳನ್ನ ಬೆಳೆಸಿದ್ದೀರ?'

ವಿಶಾಲುಗೆ ಖುಷಿಯಾಯಿತು.

'ಎಲ್ಲಾ ನಾನೇ ಬೆಳೆಸಿದ್ದು. ಹೂವಿನ ಗಿಡಗಳಿವೆ. ಖಾರದ ಮೆಣಸಿನಕಾಯಿ ಇಲ್ಲೇ ಬೆಳೀತೀವಿ. ದಪ್ಪ ಆಲೂಗೆಡ್ಡೆ ಕೂಡ ನಾವು ಬೆಳೀತೀವಿ. ನೋಡಿ ಅಲ್ಲಿ, ಹುರುಳಿಕಾಯಿ ಗೊಂಚಲು ಹ್ಯಾಗೆ ಬಿಟ್ಟಿದೆ!' ಎಂದು ಕಿಟಕಿಯಾಚೆ ತೋರಿಸಿದಳು.

'ತುಂಬಾ ಚೆನ್ನಾಗಿ ಬೆಳೆಸ್ತಾ ಇದ್ದೀರ. ಇದಕ್ಕೆ ನೀರು?' ಎಂದಾಗ ವಿಶ್ವನು ಮಡದಿಗೆ ಸನ್ನೆ ಮಾಡಿದ.

'ಇಲ್ಲ, ನೀರು ಹಾಕೊಲ್ಲ, ನೀರಿಗೆ ತೊಂದ್ರೆ ಇದೆ, ಸಹಕರಿಸಿ ಗಿಡಗಳೇ ಅಂತ ಬುದ್ಧಿ ಹೇಳಿದ್ದೀವಿ' ಎಂದಾಗ ಬೆಂಕಿಗೆ ಸಿಟ್ಟಾಯಿತು.

'ರೀ, ನಿಮ್ಮ ಬುದ್ಧಿ ಮಾತು ಗಿಡ ಕೇಳುತ್ತೇನ್ರೀ? ನೀರು ಹಾಕ್ದೆ ಹೆಂಗ್ರೀ ಬೆಳೆಯುತ್ತೆ ಅದು?'

'ಸ್ನಾನ ಮಾಡ್ತೀವಲ್ಲ, ಆ ನೀರನ್ನ ಸಂಗ್ರಹಿಸಿ ಗಿಡಕ್ಕೆ ಹಾಕ್ತೀವಿ' ಎಂದಾಗ ಬೆಂಕಿ ಮತ್ತು ವೆಂಕಿಗೆ ಆಶ್ಚರ್ಯವಾಯಿತು.

'ಸ್ನಾನ ಮಾಡಿದ ನೀರನ್ನ ಹೆಂಗೆ ಸಂಗ್ರಹಿಸ್ತೀರ?'

'ಬಾತ್‌ರೂಮಲ್ಲಿ ಔಟ್‌ಲೆಟ್ ಇದೆಯಲ್ಲ, ಅದರ ಮೇಲೆ ಒಂದು ಬಟ್ಟೆ ಇಟ್ಟು ಪೈಪ್ ಕ್ಲೋಸ್ ಮಾಡ್ಬಿಡ್ತೀವಿ. ಸ್ನಾನ ಮಾಡಿದ ನೀರೆಲ್ಲಾ ಬಾತ್‌ರೂಮಲ್ಲೇ ಇರುತ್ತೆ. ಅದನ್ನ ಬಗೆದೂ ಬಗೆದೂ ಬಕೀಟ್‌ಗೆ ಹಾಕ್ತೀವಿ. ಗಿಡಕ್ಕೆ ಸುರೀತೀವಿ. ನೋಡಿ, ನಾವು ಬೆಳೆಯೋ ತರಕಾರಿ ಕೂಡ ಸೋಪ್ ವಾಸ್ನೇನೇ ಇರುತ್ತೆ' ಎಂದು ಒಂದು ಹುರುಳೀಕಾಯನ್ನು ಕಿತ್ತು ತಂದು ಸೋಪಿಗೆ ಸವರಿ ಮೂಸಲು ಕೊಟ್ಟಳು.

'ಹೌದೌದು, ಸೋಪ್ ವಾಸ್ನೆ ಇದೆ. ಗುಡ್! ಹೀಗೇ ಇರ್ಬೇಕು. ನೀವು ಅಯೋಧ್ಯೆ ಪ್ರಸಾದ ಕೊಟ್ರೆ ನಾವು ಹೊರಟು ಬಿಡ್ತೀವಿ. ಇನ್ನೂ ಬಹಳ ಮನೆಗಳಿವೆ' ಎಂದರು.

'ತೆಗೀರಿ ಏರ್ ಬ್ಯಾಗು' ಎಂದರು ವೆಂಕಿ. ಬೀಗದ ಕೈಗೋಸ್ಕರವಾಗಿ ಮೋಹನ ತಡಕಾಡಿದ.

'ರೀ, ಟ್ಯಾಗ್ ಮೇಲೆ ಕೇಪ್‌ಟೌನ್ ಅಂತ ಇದೆಯಲ್ರೀ, ಅಲ್ಲಿಂದ ನೀವು ಇಲ್ಲಿಗೆ ಬಂದಿರೋದು. ನೋಡಿದ್ರೆ ಗೊತ್ತಾಗೊಲ್ವಾ?' ಎಂದಾಗ ಸತ್ಯ ಒಪ್ಪಿಕೊಳ್ಳಲೇಬೇಕಾಯಿತು.

'ನೋಡಿ, ನಮ್ಗೇ ತೊಂದ್ರೆ ಇರೋವಾಗ ಬೇರೆ ಬೇರೆಯವರ್ನೆಲ್ಲ ತಂದು ದೇಶದೊಳಗಡೆ ಬಿಟ್ಕೋಬಾರ್ದು. ಬೆಂಗಳೂರಲ್ಲೂ ಅದೇ ಕತೆ ಆಗಿದೆ. ಆದಷ್ಟು ಕಡಿಮೆ ನೀರನ್ನ ಬಳಸಿ. ಅನಗತ್ಯವಾಗಿ ನೀರನ್ನ ಕುಡೀಲೇಬೇಡಿ' ಎಂದಾಗ ಮೋಹನ ಉತ್ಸಾಹದಿಂದ ತನ್ನ ದೇಶದ ಬಗ್ಗೆ ಹೇಳಿದ.

'ನಮ್ಮ ಕೇಪ್‌ಟೌನಲ್ಲಿ ನೀರ್ ಬದಲು ಬೀರ್ ಕುಡೀರಿ ಅಂತ ಹೇಳ್ತಿದ್ದಾರೆ' ಎಂದ.

'ನೋಡಿದ್ರಾ, ಗುಡ್! ನೀರು ಬದಲು ಬೀರು ಕುಡೀಬೇಕಾಗುತ್ತೆ. ನೀರು ಎಲ್ಲೆಲ್ಲಿ ಬಳಿಸ್ತೀವೋ ಆದಷ್ಟೂ ಕಟ್ ಮಾಡಿ. ದಿನಕ್ಕೊಮ್ಮೆ ಮಾತ್ರ ರೆಸ್ಟ್‌ರೂಂ, ಟಾಯ್ಲೆಟ್ನಲ್ಲಿ ಪೇಪರ್ ರೋಲ್ ಬಳಸಿ' ಎಂದು ಉಪದೇಶ ಕೊಟ್ಟು ಹೊರಟರು.

ಅವರು ಹೊರಗಡೆ ಬರುವ ವೇಳೆಗೆ 'ಧೋ' ಎಂದು ಮಳೆ ಸುರಿಯಿತು.

'ಎಂಥ ಒಳ್ಳೇ ಟೈಮಲ್ಲಿ ನೀರು ಚೆಕ್ ಮಾಡಲು ಬಂದಿದ್ದೀರ ನೀವು, ತಡೀರಿ ಒಂದ್ನಿಮಿಷ' ಎಂದು ವಿಶ್ವ ಛತ್ರಿ ತೆಗೆದುಕೊಂಡು ಓಡಿ ಬರುವಾಗ ಜಾರಿ ಕೆಳಗಡೆ ಬಿದ್ದ. 'ಅಯ್ಯೋ ವಿಶಾಲೂ' ಎಂದು ಚೀರಿದ.

'ಕಿರುಚ್ಕೋಬೇಡಿ, ಇನ್ನೂ ಬೆಳಿಗ್ಗೆ 5 ಗಂಟೆ ಅಷ್ಟೇ, ಬಿದ್ಕೊಳ್ರೀ' ಎಂದಳು ವಿಶಾಲು.

'ಓಹ್! ಇದು ಕನಸಾ?' ಎಂದು ವಿಶ್ವ ಮುಸುಗಿಟ್ಟು ಮಲಗಿದ.



ಪ್ರತಿಕ್ರಿಯಿಸಿ: feedback@sudha.co.in